ಸಾಕ್ಷಿಯನ್ನು ದಿಃ 17.02.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್ ವಾಯ್ ಕೆ ವಕೀಲರಿಂದಃ**

ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

ಸಾಕ್ಷಿಯು ನಿಡಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-2(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಶ್ರೀ ಎಸ್ ಎಫ್ ಡಿ ವಕೀಲರಿಂದಃ**

1 ರಿಂದ 4 ನೇ ಪ್ರತಿವಾದಿಯರು ಸಹೋದರರು ಎಂದರೆ ಸರಿ. 1 ನೇ ವಾದಿ 1 ನೇ ಪ್ರತಿವಾದಿಯ ಮಗಳು ಎಂದರೆ ಸರಿ. 2 ನೇ ವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವು ಮೂಲತಃವಾಗಿ ಯಲ್ಲಪ್ಪನಿಂದ ಬಂದಂತಹ ಸ್ವತ್ತುಗಳು ಎಂದರೆ ಸರಿ. 2015 ರ ಪೂರ್ವದಲ್ಲಿ ಪ್ರತಿವಾದಿಯರ ಮಧ್ಯ ಪಾಲು ವಿಭಾಗವಾಗಿಲ್ಲ. ಸದರಿ ಪಾಲು ವಿಭಾಗದಲ್ಲಿ ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿ. ರಿ ಸ ನಂ. 81/1 ಸಿ ಜಮೀನಿನಲ್ಲಿ 1 ಹಾಗೂ 2 ನೇ ಪ್ರತಿವಾದಿಯರಿಗೆ ಸಮವಾಗಿ ಹಿಸ್ಸೆ ಇತ್ತು ಎಂದರೆ ಸಾಕ್ಷಿಯು ಹಿಂದೆ ಇತ್ತು, ಆದರೆ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಮಗೇ ಸೇರಿದ ಒಂದು ಕಾಗದವಿತ್ತು ಅದಕ್ಕಾಗಿ ತಹಶೀಲ್ದಾರ ಕಚೇರಿಗೆ ಹೋಗಿದ್ದೆನು, ಅಲ್ಲಿ ಪ್ರತಿವಾದಿಯರು ಬಂದಿದ್ದರು ಅವರು ಕರೆಯಿಸಿ ನನ್ನ ರುಜುವನ್ನು ತೆಗೆದುಕೊಂಡಿರುತ್ತಾ್ರರೆ. ಅಲ್ಲಿ ಇಬ್ಬರು ಇದ್ದರು ಅವರ ಹೆಸರು ನೆನಪಿಲ್ಲ. ನನ್ನೊಂದಿಗೆ ನಮ್ಮ ಊರಿನವರನ್ನು ಹೊರತು ಪಡಿಸಿ ಬೇರೇ ಯಾರು ಇರಲಿಲ್ಲ. ನಿಡಿ-2 ನ್ನು ಬರೆಯಲು 1 ನೇ ಪ್ರತಿವಾದಿಯು ಕಾಗದವನ್ನು ಬರೆಯಲು ಮಾಹಿತಿ ಕೊಟ್ಟಿರುತ್ತಾನೆ. ನಿಡಿ-2 ಜಮೀನಿಗೆ ಸಂಬಂಧಿಸಿದ ಕಾಗದ. ನಿಡಿ-2 ಆಗುವ ಸಮಯದಲ್ಲಿ 1 ಹಾಗೂ 2 ನೆ ಪ್ರತಿವಾದಿಯರ

ಹೆಸರಿನಲ್ಲಿ ಜಂಟಿಯಾಗಿ ನಿಡಿ-2 ರ ಸ್ವತ್ತು ಇತ್ತು. ನಿಡಿ-2 ಕ್ಕೆ ಗುರುತುಬಲ್ಲವರು ಎಂದು ಯಾರು ರುಜು ಮಾಡಿದರು ಎಂದು ನನಗೆ ಮಾಹಿತಿ ಇಲ್ಲ. ಸರ್ವೇ ನಂಬರ 81/1 ಸಿ ರಲ್ಲಿ ವಾದಿಯರಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿ. ನಾನು ಹಾಗೂ 1 ನೇ ಪ್ರತಿವಾದಿಯರು ಒಂದೇ ಗ್ರಾಮದವರು ಹಾಗೂ ಗೆಳೆಯರು ಎಂದರೆ ಸರಿ. ಸರ್ವೆ ನಂಬರ 81/1 ಸಿ ರಲ್ಲಿ ಇರುವಂತಹ ವಾದಿಯರು ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ನಾನು ಹಾಗೂ 1 ನೇ ಪ್ರತಿವಾದಿ ಸೇರಿಕೊಂಡು ನಿಡಿ-2 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ದಿನದವರೆಗೂ ವಾದಿಯರು ಹಾಗೂ 1 ನೇ ಪ್ರತಿವಾದಿ ಜಂಟಿಯಾಗಿ ರಿ ಸ ನಂ. 81/1 ಸಿ ಜಮೀನನ್ನು ಸಾಗುವಳಿ ಮಾಡುತ್ತಾ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರು ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಿ ಸ ನಂ. 1/36 ವಿಸ್ತೀರ್ಣ 1 ಗುಂಟೆ 8 ಆಣೆಯಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯವಾಗಿದೆ ಎಂದರೆ ಸರಿ. ಅದರಲ್ಲಿ ತಗಡಿನ ಶೆಡ್ಡು ಇದೆ ಎಂದರೆ ಸರಿ. ಈಗ ವಾದಿಯರು ವಾಸವಾಗಿದ್ದಾರೆ ಎಂದರೆ ಸರಿ. ಚನ್ನಪ್ಪನಿಗೆ ಜಮೀನಿಂದ ಬಂದ ಆದಾಯವನ್ನು ಹೊರತು ಪಡಿಸಿ ಬೇರೇ ಯಾವುದೇ ಆದಾಯವಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಉಳಿದ ಜಮೀನುಗಳಿಂದ ಬಂದ ಆದಾಯದಿಂದಲೇ ಸದರಿ 1 ಗುಂಟೆ 8 ಆಣೆ ಜಮೀನನ್ನು ಕ್ರಯಕ್ಕೆ ಹಿಡಿದಿರುತ್ತಾನೆ ಎಂದರೆ ಸರಿ. ಕಾರಣ, ವಾದಿಯರಿಗೆ ಸದರಿ ಸ್ವತ್ತಿನಲ್ಲಿ ಸಹ ಭಾಗ ಇರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಸದರಿ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಭಾಗವಿದ್ದರೂ ಸಹ 1 ನೇ ಪ್ರತಿವಾದಿಯ ಮಾತ ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು. ವಿ. ಪ್ರಮಾಣ ಪತ್ರದಲ್ಲಿ ಹೇಳಿರುವ ಮಾಹಿತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: **17.02..2022**

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ.